# ಖಾಸಗಿತನದ ನೀತಿ

ಈ ಗೌಪ್ಯತೆಯ ನೀತಿಯಲ್ಲಿ ("ನೀತಿ"), ನಾವು Qualcomm Incorporated ಮತ್ತು ನಮ್ಮ ಆಧೀನ ಸಂಸ್ಥೆಗಳು (ಒಟ್ಟಾಗಿ "ನಾವು", "ನಮಗೆ", ಅಥವಾ "ನಮ್ಮ"), ನಾವು ವೈಯಕ್ತಿಕ ಡೇಟಾವನ್ನು ಹೇಗೆ ಸಂಗ್ರಹಿಸುತ್ತೇವೆ, ಬಳಸುತ್ತೇವೆ, ಪ್ರಕ್ರಿಯೆಗೊಳಿಸುತ್ತೇವೆ ಮತ್ತು ವರ್ಗಾಯಿಸುತ್ತೇವೆ ಎನ್ನುವ ಕುರಿತು ಮಾಹಿತಿ ಒದಗಿಸುತ್ತೇವೆ. Qualcomm Incorporated ಮತ್ತು ನಮ್ಮ ಆಧೀನ ಸಂಸ್ಥೆಗಳು ಜಾಗತಿಕ ಸಂಸ್ಥೆಯಾಗಿದ್ದು ಜಗತ್ತಿನಾದ್ಯಂತದವಾಗಿ ನಮ್ಮ ವ್ಯವಹಾರ (ಕಾಯ್ದೆಬದ್ಧ ಸಂಸ್ಥೆಗಳು), ವ್ಯವಹಾರ ಪ್ರಕ್ರಿಯೆಗಳು ಮತ್ತು ಮಾಹಿತಿ ಸಿಸ್ಟಂಗಳ ಉದ್ದಕ್ಕೂ ನಿರ್ವಹಿಸುವ ಡೇಟಾವನ್ನು ಹಂಚಿಕೊಳ್ಳುತ್ತೇವೆ. ಆದ್ದರಿಂದ, ಈ ನೀತಿಗಾಗಿ ನಾವು "ವೈಯಕ್ತಿಕ ಡೇಟಾ" ಎನ್ನುವ ಶಬ್ದವು ನಮಗೆ ಅನ್ವಯಿಸುವ ಅನೇಕ ಗೌಪ್ಯತೆ ಹಾಗೂ ಡೇಟಾ ರಕ್ಷಣೆಯ ಕಾನೂನುಗಳನ್ನು ವ್ಯಾಪಕವಾಗಿ ಒಳಗೊಂಡಿರುತ್ತದೆ; "ವೈಯಕ್ತಿಕ ಡೇಟಾ" ಎಂದರೆ ಗುರುತಿಸಲಾಗಿರುವ ನೈಸರ್ಗಿಕ ವ್ಯಕ್ತಿಗೆ ಸಂಬಂಧಿಸಿದ ಮಾಹಿತಿ ಅಥವಾ ನೈಸರ್ಗಿಕ ವ್ಯಕ್ತಿಯೊಬ್ಬರನ್ನು ಗುರುತಿಸುವುದಕ್ಕೆ ಸಕಾರಣವಾಗಿ ಬಳಸುವ (ಸ್ವತಃ ಅಥವಾ ಸಕಾರಣವಾಗಿ ಲಭ್ಯವಿರುವ ಇತರ ಡೇಟಾ) ಆಗಿರುತ್ತದೆ.

## ವ್ಯಾಪ್ತಿ

ಈ ನೀತಿಯು ಈ ನೀತಿಗೆ ನೇರ ಲಿಂಕ್ ಅನ್ನು ಪೋಸ್ಟ್ ಮಾಡುವ ನಮ್ಮ ವೆಬ್‌ಸೈಟುಗಳು, ಉತ್ಪನ್ನಗಳು, ಸೇವೆಗಳು, ಸಾಫ್ಟ್‌ವೇರ್ ಅಥವಾ ಅಪ್ಲಿಕೇಶನ್‌ಗಳಿಗೆ ಅನ್ವಯಿಸುತ್ತದೆ ಅಥವಾ ಈ ನೀತಿಯೊಳಗಿನದಕ್ಕೆ ಉಲ್ಲೇಖಿಸಲ್ಪಡುತ್ತವೆ (ಒಟ್ಟಾಗಿ "ಸೇವೆಗಳು"). ಈ ನೀತಿಯು ಸೇವೆಗಳ ಮೂಲಕ ಸಂಗ್ರಹಿಸಿದ ಡೇಟಾವನ್ನು ಮಾತ್ರ ಒಳಗೊಂಡಿದೆ ಮತ್ತು ಇತರ ಸೇವೆಗಳ ಡೇಟಾ ಸಂಗ್ರಹಣೆಯ ರೂಢಿಗಳನ್ನು ತಮ್ಮದೇ, ಪ್ರತ್ಯೇಕ ಗೌಪ್ಯತೆಯ ನೀತಿಗಳನ್ನು ಸೇರಿದಂತೆ ಆದರೆ ಅವುಗಳಿಗೆ ಸೀಮಿತವಾಗಿಲ್ಲದೇ ಬೇರೆ ಯಾವುದೇ ಡೇಟಾ ಸಂಗ್ರಹಣೆ ಅಥವಾ ಪ್ರಕ್ರಿಯೆಯನ್ನು ಒಳಗೊಂಡಿಲ್ಲ. ಕೆಲವೊಮ್ಮೆ, ನಾವು ಸಮೀಕ್ಷೆಗಳು ಮತ್ತು ವಿಶೇಷ ಉದ್ದೇಶದ ವೆಬ್ ಪುಟಗಳಿಗೆ ಸಂಬಂಧಿಸಿದಂತೆ ಈ ನೀತಿಯನ್ನು ಉಲ್ಲೇಖಿಸುತ್ತೇವೆ, ಉದಾಹರಣೆಗೆ, ನಮ್ಮ ಉದ್ಯೋಗಾವಕಾಶ ವೆಬ್ ಪುಟಗಳು; ಅಂತಹ ಸಂದರ್ಭಗಳಲ್ಲಿ, ಈ ನೀತಿಯು ನಿರ್ದಿಷ್ಟ ಸೂಚನೆ ಅಥವಾ ಸಮ್ಮತಿಯ ವಿನಂತಿಯಲ್ಲಿ ಮಾರ್ಪಡಿಸಿದಂತೆ ಅನ್ವಯಿಸುತ್ತದೆ (ಉದಾ., ಸಂಗ್ರಹಿಸಿದ ಡೇಟಾ ಅಥವಾ ಸಂಗ್ರಹಣೆಯ ಉದ್ದೇಶಗಳಿಗೆ ಸಂಬಂಧಿಸಿದಂತೆ).

## ಡೇಟಾ ವಿಧಗಳು ಮತ್ತು ಸಂಗ್ರಹಣೆಯ ವಿಧಾನಗಳು

ಕೆಳಗೆ ವಿವರಿಸಿದ ವಿಧಾನಗಳ ಮೂಲಕ ನಾವು ವಿವಿಧ ರೀತಿಯ ವೈಯಕ್ತಿಕ ಡೇಟಾವನ್ನು ಸಂಗ್ರಹಿಸುತ್ತೇವೆ. ನಾವು ಸಂಗ್ರಹಿಸುವ ಡೇಟಾದ ಬಗ್ಗೆ ನಿಮಗೆ ಆಯ್ಕೆಗಳಿವೆ. ನಮಗೆ ಡೇಟಾವನ್ನು ಒದಗಿಸಲು ನಿಮ್ಮನ್ನು ಕೇಳಿದಾಗ, ನೀವು ನೀಡದೇ ಇರಲು ಆಯ್ಕೆ ಮಾಡಬಹುದು. ಆದರೆ ನೀವು ಡೇಟಾವನ್ನು ಒದಗಿಸಲು ನಿರಾಕರಿಸಿದರೆ, ಅನ್ವಯವಾಗುವ ಉತ್ಪನ್ನ ಅಥವಾ ಸೇವೆಯನ್ನು ಬಳಸಲು ನಿಮ್ಮಿಂದ ಸಾಧ್ಯವಾಗದೇ ಇರಬಹುದು ಅಥವಾ ನಿರ್ಬಂಧಿಸಬಹುದು.

**ನೀವು ಸಲ್ಲಿಸುವ ಡೇಟಾ.** ನೀವು ನಮ್ಮಿಂದ ಮಾಹಿತಿಯನ್ನು ವಿನಂತಿಸಿದಾಗ, ನೋಂದಾಯಿಸಿದಾಗ, ಪ್ರಾಡಕ್ಟ್ ಅಥವಾ ಸೇವೆಯನ್ನು ಆರ್ಡರ್ ಮಾಡಿದಾಗ ಅಥವಾ ಉದ್ದೇಶಪೂರ್ವಕವಾಗಿ ಅಂತಹ ಮಾಹಿತಿಯನ್ನು ಕಳುಹಿಸಿದಾಗ ನಿಮ್ಮ ಹೆಸರು, ಇಮೇಲ್ ವಿಳಾಸ (ಗಳು), ಅಂಚೆ ವಿಳಾಸ (ಗಳು), ದೂರವಾಣಿ ಸಂಖ್ಯೆ (ಗಳು), ಮತ್ತು ನೀವು ಪ್ರತಿನಿಧಿಸುವ ವ್ಯವಹಾರಕ್ಕೆ ಸಂಬಂಧಿಸಿದ ಡೇಟಾವನ್ನು ನಾವು ಸಂಗ್ರಹಿಸುತ್ತೇವೆ. ಶುಲ್ಕ ವಿಧಿಸಬಹುದಾದ ಸೇವೆಗಳಿಗೆ ಸಂಬಂಧಿಸಿದಂತೆ, ನಾವು ಹಣಪಾವತಿ ಮಾಹಿತಿ (ಉದ□., ಕ್ರೆಡಿಟ್ ಕಾರ್ಡ್ ಸಂಖ್ಯೆ ಮತ್ತು ಸಂಬಂಧಿತ ದೃಢೀಕರಣ ಡೇಟಾ), ಫೋನ್ ಸಂಖ್ಯೆ, ಮತ್ತು ಬಿಲ್ಲಿಂಗ್ ಮತ್ತು ಶಿಪ್ಪಿಂಗ್ ವಿಳಾಸಗಳನ್ನು ಸಹ ಸಂಗ್ರಹಿಸುತ್ತೇವೆ.

**ನಮ್ಮ ವೆಬ್‌ಸೈಟುಗಳಿಂದ ನಾವು ಸ್ವಯಂಚಾಲಿತವಾಗಿ ಸಂಗ್ರಹಿಸುವ ಡೇಟಾ.** ನಮ್ಮ ವೆಬ್ ಸೈಟುಗಳಲ್ಲಿ ಒಂದನ್ನು ನೀವು ಭೇಟಿ ಮಾಡಿದಾಗ, ನಾವು ನಿಮ್ಮ ಕಂಪ್ಯೂಟರ್ ಅಥವಾ ಮೊಬೈಲ್ ಸಾಧನದಿಂದ ನಿಮ್ಮ ಬ್ರೌಸರ್ ವಿಧ, ಆಪರೇಟಿಂಗ್ ಸಿಸ್ಟಮ್, IP ಅಡ್ರೆಸ್ ಮತ್ತು ನೀವು ಸೈಟ್ ಅನ್ನು ಪ್ರವೇಶಿಸಿದ ಡೊಮೇನ್ ಹೆಸರು ಮತ್ತು ನೀವು ನಮ್ಮ ಸೈಟ್ ಅನ್ನು ನಿಮ್ಮ ಮೊಬೈಲ್ ಮೂಲಕ ಪ್ರವೇಶಿಸಿದ್ದರೆ ಮೊಬೈಲ್ ಸಾಧನದ ವಿಧದಂತಹ ಸಾಮಾನ್ಯ ಡೇಟಾವನ್ನು ಸಂಗ್ರಹಿಸುತ್ತೇವೆ. ಇದರೊಂದಿಗೆ, ನೀವು ಸೈಟ□ ಅನ್ನು ಭೇಟಿ ಮಾಡಿದ ದಿನಾಂಕ ಮತ್ತು ಸಮಯ, ನೀವು ಭೇಟಿ ನೀಡುವ ಸೈಟುಗಳ ಪ್ರದೇಶ ಅಥವಾ ಪುಟ, ಸೈಟ್ ನಲ್ಲಿ ನೀವು ಕಳೆಯುವ ಸಮಯ, ನೀವು ಎಷ್ಟು ಬಾರಿ ಪುನಃ ಬಳಸುತ್ತೀರಿ ಎನ್ನುವುದರಂತಹ ವೆಬ್‌ಸೈಟುಗಳ ಬಳಕೆಯ ಡೇಟಾವನ್ನು ಮತ್ತು ಇತರ ಕ್ಲಿಕ್-ಸ್ಟ್ರೀಮ್ ಡೇಟಾವನ್ನು ನಾವು ಸಂಗ್ರಹಿಸುತ್ತೇವೆ.

**ಕುಕೀಗಳು**. ನಾವು ಕುಕೀಗಳನ್ನು, ವೆಬ್ ಬೀಕನ್‌ಗಳನ್ನು ಅಥವಾ ಅಂತಹುದೇ ತಂತ್ರಜ್ಞಾನಗಳನ್ನು ನಮ್ಮ ವೆಬ್‌ಸೈಟುಗಳು ಅಥವಾ ವೆಬ್ ಆ್ಯಪ್‌ಗಳ ಕುರಿತು ಡೇಟಾವನ್ನು ಸಂಗ್ರಹಿಸುತ್ತೇವೆ. ಕುಕೀ ಎನ್ನುವುದು ಚಿಕ್ಕ ಪಠ್ಯ ಫೈಲ್ ಆಗಿದ್ದು ನೀವು ಸೈಟ್ ಒಂದನ್ನು ಆಕ್ಸೆಸ್ ಮಾಡಿದಾಗ ಇದು ನಿಮ್ಮ ಕಂಪ್ಯೂಟರಿನ ಅಥವಾ ಸಾಧನದ ಹಾರ್ಡ್ ಡ್ರೈವ್‌ನಲ್ಲಿ ಶೇಖರಗೊಳ್ಳುತ್ತದೆ. ನಾವು ಇವುಗಳನ್ನು ಒಳಗೊಂಡು ನಮ್ಮ ಸೈಟುಗಳು ಮತ್ತು ಸೇವೆಗಳನ್ನು ನಿರ್ವಹಿಸಲು ಸಹಾಯವಾಗಲೆಂದು ಕುಕೀಗಳನ್ನು ಬಳಸುತ್ತೇವೆ: (1) ನೀವು ಸೈಟಿಗೆ ಹಿಂತಿರುಗಿದಾಗ ನೀವು ಪುನಃ ಅದೇ ಮಾಹಿತಿಯನ್ನು ನಮೂದಿಸುವ ಅಗತ್ಯವಿಲ್ಲದಂತೆ ನಿಮ್ಮನ್ನು ನೆನಪಿನಲ್ಲಿಟ್ಟುಕೊಳ್ಳಲು (2) ಸೈಟಿನಲ್ಲಿ ಕಸ್ಟಮೈಸ್ ಮಾಡಲಾದ ವಿಷಯ ಅಥವಾ

ಕೊಡುಗೆಗಳನ್ನು ಒದಗಿಸುವುದು; (3) ಸೈಟ್ ನಿರ್ವಹಣೆಯ ಮೇಲ್ವಿಚಾರಣೆ ಮಾಡಲು, ಸಂಶೋಧನೆ ನಡೆಸಲು, ನಮ್ಮ ವಿಷಯ ಮತ್ತು ಸೇವೆಗಳನ್ನು ಸುಧಾರಿಸಲು ಸಹಾಯವಾಗುವಂತೆ ಅಂಕಿಅಂಶಗಳನ್ನು ಒಟ್ಟುಗೂಡಿಸುವುದು ಮತ್ತು (4) ನಮ್ಮ ಸೈಟುಗಳು ಮತ್ತು ಸೇವೆಗಳ ಸುರಕ್ಷತೆ ರಕ್ಷಿಸುವುದಕ್ಕೆನೆರವಾಗಲು.

ನಾವು ವೆಬ್ ಅನಾಲಿಟಿಕ್ಸ್ ಪಾಲುದಾರರು, ಅಡ್ವರ್ಟೈಸರುಗಳು ಅಥವಾ ಆ್ಯಡ್ ನೆಟ್‌ವರ್ಕ್‌ಗಳು ತಮ್ಮ ಕುಕೀಗಳು ಅಥವಾ ವೆಬ್ ಬೀಕನ್‌ಗಳನ್ನು (1x1 pixel.gifs ಅಥವಾ ಆ್ಯಕ್ಷನ್ ಟ್ಯಾಗ್‌ಗಳು.) ವೆಬ್‌ಸೈಟಿನಲ್ಲಿ ಸ್ಥಾಪಿಸಲು ಅಥವಾ ಆಕ್ಸೆಸ್ ಮಾಡಲು ಅನುಮತಿಸುತ್ತೇವೆ. ಉದಾಹರಣೆಗೆ ನಾವು ಮೂರನೇ ಪಕ್ಷದ ಅಡ್ವರ್ಟೈಸಿಂಗ್ ಕಂಪನಿಗಳನ್ನು ನಮ್ಮ ಪರವಾಗಿ ಇಂಟರ್‌ನೆಟ್‌ನಲ್ಲಿ ಆ್ಯಡ್‌ಗಳನ್ನು ನೀಡಲು ಅಥವಾ ನಮ್ಮ ಸೈಟಿನಲ್ಲಿ ಇತರ ಕಂಪನಿಗಳ ಆ್ಯಡ್‌ಗಳನ್ನು ಪ್ರದರ್ಶಿಸಲು ಬಳಸುತ್ತೇವೆ. ಈ ಮೂರನೇ ಪಕ್ಷದ ಅಡ್ವರ್ಟೈಸಿಂಗ್ ಕಂಪನಿಗಳು ಕುಕೀಗಳು ಅಥವಾ ವೆಬ್ ಬೀಕನ್‌ಗಳನ್ನು ಬಳಸುತ್ತವೆ ಮತ್ತು ತಮ್ಮ ಗ್ರಾಹಕರಿಗಾಗಿ ಆ್ಯಡ್‌ಗಳ ಪರಿಣಾಮಕತ್ವವನ್ನು ನಮಗಾಗಿ ಒಳಗೊಂಡಂತೆ ಸುಧಾರಿಸುತ್ತವೆ. ಹಾಗೆ ಮಾಡಲು, ಈ ಕಂಪನಿಗಳು ನಮ್ಮ ಸೈಟಿನಲ್ಲಿ ಮತ್ತು ಇತರ ವೆಬ್‌ಸೈಟುಗಳಲ್ಲಿ ಕಾಲಕಾಲಕ್ಕೆ ನಿಮ್ಮ ಭೇಟಿಗಳ ಕುರಿತು ಡೇಟಾವನ್ನು ಬಳಸುತ್ತವೆ. ಈ ಡೇಟಾವು ಇವುಗಳನ್ನು ಒಳಗೊಂಡಿರಬಹುದು: ಬ್ಯಾನರ್ ಆ್ಯಡ್ ತೋರಿಸಿದ ದಿನಾಂಕ ಮತ್ತು ಸಮಯ, ಅವರ ಕುಕೀಯಲ್ಲಿರುವ ವಿಶಿಷ್ಟ ಐಡೆಂಟಿಫೈಯರ್ ಮತ್ತು ನಿಮ್ಮ ಸಾಧನದ IP ಅಡ್ರೆಸ್. ಈ ಡೇಟಾವನ್ನು ಆ್ಯಡ್‌ಗಳನ್ನು ವೈಯಕ್ತಿಕಗೊಳಿಸಲು ಬಳಸಬಹುದು, ಇದರಿಂದ ನಿಮಗೆ ಆಸಕ್ತಿಕರವಾದ ವಸ್ತುಗಳು ಮತ್ತು ಸೇವೆಗಳ ಕುರಿತು ಆ್ಯಡ್‌ಗಳನ್ನು ನೋಡಬಹುದು. ನೀವು ಈ ರೂಢಿಯ ಬಗ್ಗೆ ಮತ್ತು ವೈಯಕ್ತಿಕಗೊಳಿಸಿದ ಅಡ್ವರ್ಟೈಸಿಂಗ್ ಕುರಿತು ಹೆಚ್ಚಿನ ಮಾಹಿತಿಯನ್ನು ಪಡೆಯಲು ಬಯಸಿದಲ್ಲಿ ಈ ಲೇಖನದಿಂದ ಹೊರಬನ್ನಿ ಸಂದರ್ಶಿಸಿ.

ನೀವು ಕುಕೀಗಳನ್ನು ತಿರಸ್ಕರಿಸಲು ಮುಕ್ತವಾಗಿದ್ದೀರಿ, ಆದರೆ ಹಾಗೆ ಮಾಡುವ ಮೂಲಕ ನೀವು ಸೈಟಿನಲ್ಲಿ ಕೆಲವು ವೈಶಿಷ್ಟ್ಯಗಳನ್ನು ಬಳಸುವುದಕ್ಕೆ ಅಥವಾ ನಿಮ್ಮ ಎಲ್ಲ ಆಫರಿಂಗ್‌ಗಳ ಸಂಪೂರ್ಣ ಅನುಕೂಲತೆಯನ್ನು ಪಡೆಯಲು ಸಾಧ್ಯವಾಗುವುದಿಲ್ಲ. ನಿಮ್ಮ ಕುಕೀ ಆದ್ಯತೆಗಳನ್ನು ಹೇಗೆ ಬದಲಾಯಿಸಬೇಕು ಎನ್ನುವುದನ್ನು ತಿಳಿಯಲು ನಿಮ್ಮ ಬ್ರೌಸರಿನ "ಹೆಲ್ಪ್" ಮೆನುವನ್ನು ಪರೀಕ್ಷಿಸಿ. ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ನಿಮ್ಮ ಕುಕೀ ನೀತಿಯನ್ನು ನೋಡಿರಿ.

**ಸಾಫ್ಟ್‌ವೇರ್‌ಗಳು ಮತ್ತು ಆ್ಯಪ್‌ಗಳು:** Qualcomm Incorporated ನ ಆಧೀನ ಸಂಸ್ಥೆಗಳು ವಿವಿಧ ಸಾಫ್ಟ್‌ವೇರ್‌ಗಳು, ಅಪ್ಲಿಕೇಶನ್‌ಗಳು ಮತ್ತು ಸೇವೆಗಳನ್ನು ಮೊಬೈಲ್ ಸಾಧನದ ಕಾರ್ಯನಿರ್ವಹಣೆಯನ್ನು ಸುಧಾರಿಸಲು, ಬ್ಯಾಟರಿ ವ್ಯಯವಾಗುವುದನ್ನು ತಡೆಗಟ್ಟಲು ನೆರವಾಗಲು ಮತ್ತು ಸಾಧನದ ಸುರಕ್ಷತೆಯನ್ನು ಸುಧಾರಿಸಲು ಮತ್ತು ಇತರ ಪ್ರಯೋಜನಗಳನ್ನು ಒದಗಿಸುವುದಕ್ಕಾಗಿ ರೂಪಿಸುತ್ತವೆ. ಈ ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳ ಮೂಲಕ ನಾವು ಸ್ಥಳ ಡೇಟಾ, ವಿಶಿಷ್ಟ ಐಡೆಂಟಿಫೈಯರುಗಳು (ಅಂದರೆ ಚಿಪ್‌ಸೆಟ್ ಸಿರಿಯಲ್ ನಂಬರ್ ಅಥವಾ

ಅಂತರಾಷ್ಟ್ರೀಯ ಸಬ್‌ಸ್ಕ್ರೈಬರ್ ID) ಇನ್‌ಸ್ಟಾಲ್ ಮಾಡಿರುವ/ಸಾಧನದಲ್ಲಿ ರನ್ ಆಗುತ್ತಿರುವ ಅಪ್ಲಿಕೇಶನ್‌ಗಳ ಬಗೆಗಿನ ಡೇಟಾ, ಮಾಡೆಲ್,ವೈರ್‌ಲೆಸ್ ಕ್ಯಾರಿಯರ್, ಆಪರೇಟಿಂಗ್ ಸಿಸ್ಟಮ್ ಮತ್ತು ಆವೃತ್ತಿ, ಸಾಫ್ಟ್‌ವೇರ್ ಬಿಲ್ಡ್ ಡೇಟಾ, ಮತ್ತು ಚಿಪ್‌ಸೆಟ್ ಕಾರ್ಯಕ್ಷಮತೆ, ಬ್ಯಾಟರಿ ಬಳಕೆ ಮತ್ತು ಉಷ್ಣತೆಯ ಕುರಿತಾದ ಡೇಟಾ ಮುಂತಾದ ಸಾಧನದ ಕಾರ್ಯನಿರ್ವಹಣೆಯ ಅಂಕಿಅಂಶಗಳ ಕುರಿತಾದ ಡೇಟಾದಂತಹ ಕಾನ್ಫಿಗರೇಶನ್ ಡೇಟಾಗಳನ್ನು ನಾವು ಸಂಗ್ರಹಿಸಬಹುದು. ಹೆಚ್ಚು ತಿಳಿಯಿರಿ

**ಮೂರನೇ ಪಕ್ಷದ ಮೂಲಗಳು**: ನಾವು ಡೇಟಾ ಬ್ರೋಕರುಗಳು, ಸಾಮಾಜಿಕ ನೆಟ್‌ವರ್ಕ್‌ಗಳು, ಇತರ ಪಾಲುದಾರರು ಅಥವಾ ಸಾರ್ವಜನಿಕ ಮೂಲಗಳಂತಹ ಮೂರನೇ ಪಕ್ಷದ ಮೂಲಗಳಿಂದ ವೈಯಕ್ತಿಕ ಡೇಟಾವನ್ನು ಪಡೆಯಬಹುದು.

# ಸಂಗ್ರಹಣೆಯ ಉದ್ದೇಶಗಳು, ಡೇಟಾದ ಬಳಕೆ

ನಾವು ನಿಮ್ಮ ಕುರಿತಾದ ವೈಯಕ್ತಿಕ ಡೇಟಾವನ್ನು ನಿಮ್ಮ ಸಮ್ಮತಿಯೊಂದಿಗೆ ಸಂಗ್ರಹಿಸುತ್ತೇವೆ ಮತ್ತು ಪ್ರಕ್ರಿಯೆಗೊಳಿಸುತ್ತೇವೆ ಮತ್ತು/ಅಥವಾ ಅಗತ್ಯವಾಗಿರುವಂತೆ ಪ್ರಾಡಕ್ಟುಗಳನ್ನು ನಿಮ್ಮ ಬಳಕೆಗೆ, ವ್ಯವಹಾರವನ್ನು ನಿರ್ವಹಿಸುವುದಕ್ಕೆ, ನಮ್ಮ ಒಪ್ಪಂದದ ಹಾಗೂ ಕಾನೂನು ಬಾಧ್ಯತೆಗಳನ್ನು ಪೂರ್ತಿಗೊಳಿಸುವುದಕ್ಕೆ, ನಮ್ಮ ಸಿಸ್ಟಂಗಳ ಮತ್ತು ನಮ್ಮ ಗ್ರಾಹಕರ ಸುರಕ್ಷತೆಯನ್ನು ಅಥವಾ ಇತರ ಕಾಯ್ದೆಬದ್ಧ ಹಿತಾಸಕ್ತಿಗಳನ್ನು ರಕ್ಷಿಸುವುದಕ್ಕೆ ಒದಗಿಸುತ್ತೇವೆ. ನಾವು ಡೇಟಾವನ್ನು ಸಂಗ್ರಹಿಸುವ ಮತ್ತು ಬಳಸುವ ಉದ್ದೇಶವು ಇವುಗಳನ್ನು ಒಳಗೊಂಡಿದೆ:

- ನೀವು ನಮಗೆ ಕಳುಹಿಸಿದ ಮಾಹಿತಿಗೆ ವಿನಂತಿ ಅಥವಾ ಸೇವೆಯೊಂದಕ್ಕೆ ಸಬ್‌ಸ್ಕ್ರೈಬ್ ಮಾಡುವ ಅಥವಾ ಪ್ರಾಡಕ್ಟ್ ಒಂದನ್ನು ಖರೀದಿಸುವ ವಿನಂತಿಯಂತಹ ವಿನಂತಿಗಳಿಗೆ ಪ್ರತಿಕ್ರಿಯಿಸುವುದಕ್ಕಾಗಿ;
- ನೀವು ವಿನಂತಿಸುವ ಸೇವೆಯನ್ನು(ಗಳನ್ನು) ಒದಗಿಸಲು, ನಿರ್ವಹಿಸಲು, ಕಾಯ್ದುಕೊಳ್ಳಲು ಮತ್ತು ಸುರಕ್ಷಿತಗೊಳಿಸಲು;
- ನಮ್ಮ ಸೇವೆಗಳು ಮತ್ತು ನಮ್ಮ ವ್ಯವಸ್ಥೆಗಳನ್ನು ನಿಯಂತ್ರಿಸಲು, ರಕ್ಷಿಸಲು ಮತ್ತು ಸುಧಾರಿಸಲು, ಹೊಸ ಉತ್ಪನ್ನಗಳನ್ನು ಮತ್ತು ಸೇವೆಗಳನ್ನು ಅಭಿವೃದ್ಧಿಪಡಿಸಲು ಮತ್ತು ಇತರ ಆಂತರಿಕ ವ್ಯಾಪಾರ ಉದ್ದೇಶಗಳನ್ನು ಒಳಗೊಂಡು ನಮ್ಮ ವ್ಯವಹಾರವು ಕಾರ್ಯನಿರ್ವಹಿಸಲು ಮತ್ತು ಅದನ್ನು ಸುಧಾರಿಸಲು;
- ನಮ್ಮ ಸೇವೆಗಳ ಬಳಕೆದಾರರ ಆದ್ಯತೆಗಳನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು, ನಮ್ಮ ಸೇವೆಗಳ ಬಳಕೆಯ ಕುರಿತು ಒಟ್ಟಾರೆ ಅಂಕಿಅಂಶಗಳನ್ನು ಒಟ್ಟುಗೂಡಿಸಲು ಮತ್ತು ನಮ್ಮ ವೆಬ್‌ಸೈಟ್ ಮತ್ತು ಸೇವೆಗಳ ನಿಮ್ಮ ಅನುಭವವನ್ನು ವೈಯಕ್ತೀಕರಿಸುವುದಕ್ಕೆ ಸಹಾಯ ಮಾಡಲು;

- ನಮ್ಮ ತಂತ್ರಜ್ಞಾನಗಳು, ಉತ್ಪನ್ನ ಅಥವಾ ಸೇವೆ ಪ್ರಕಟಣೆಗಳು, ಸುದ್ದಿಗಳು ಮತ್ತು ಇತರ ಸಂವಹನಗಳ ಬಗ್ಗೆ ನಿಮಗೆ ಮಾಹಿತಿಯನ್ನು ಒದಗಿಸಲು; ಮತ್ತು
- ಈ ನೀತಿಯಲ್ಲಿ ಅಥವಾ ನಾವು ಡೇಟಾವನ್ನು ಸಂಗ್ರಹಿಸುವ ಸಮಯದಲ್ಲಿ ವಿವರಿಸುವ ಯಾವುದೇ ಇತರ ಬಳಕೆ.

ಈ ಉದ್ದೇಶಗಳನ್ನು ಸಾಧಿಸಲು ಮತ್ತು ಅನ್ವಯಿಸುವ ಕಾನೂನು ಅನುಮತಿಸುವ ಮಟ್ಟಿಗೆ, ನಾವು ವಿಭಿನ್ನ ಮೂಲಗಳಿಂದ ಸಂಗ್ರಹಿಸಿದ ವಿವಿಧ ರೀತಿಯ ಡೇಟಾವನ್ನು ಸಂಯೋಜಿಸಬಹುದು.

# ಎಲ್ಲಿ ನಾವು ಡೇಟಾವನ್ನು ಸಂಗ್ರಹಿಸುತ್ತೇವೆ ಮತ್ತು ಪ್ರಕ್ರಿಯೆಗೊಳಿಸುತ್ತೇವೆ

ನಾವು ಯುನೈಟೆಡ್ ಸ್ಟೇಟ್ಸ್ ಮತ್ತು ಏಷ್ಯಾ ಮತ್ತು ಐರೋಪ್ಯ ಆರ್ಥಿಕ ವಲಯ ಒಳಗೊಂಡು ಆದರೆ ಅವುಗಳಿಗೆ ಸೀಮಿತವಾಗಿಲ್ಲದೇ ವಿಶ್ವದಾದ್ಯಂತದ ಸರ್ವರ್‌ಗಳಲ್ಲಿ ಡೇಟಾವನ್ನು ಸಂಗ್ರಹಿಸುತ್ತೇವೆ ಮತ್ತು ಪ್ರಕ್ರಿಯೆಗೊಳಿಸುತ್ತೇವೆ. ಈ ನೀತಿಗೆ ಅನುಗುಣವಾಗಿ ವೈಯಕ್ತಿಕ ಡೇಟಾ ಸಂಗ್ರಹಿಸುವ ಅಥವಾ ಪ್ರಕ್ರಿಯೆಗೊಳಿಸಿದಲ್ಲೆಲ್ಲಾ, ಡೇಟಾವನ್ನು ಈ ನೀತಿಯ ಅನುಸಾರವಾಗಿ ಮತ್ತು ಅನ್ವಯಿಸುವ ಕಾನೂನಿಗೆ ಬದ್ಧವಾಗಿ ಪ್ರಕ್ರಿಯೆಗೊಳಿಸಲಾಗುತ್ತದೆ ಎಂದು ಖಾತ್ರಿಪಡಿಸಿಕೊಳ್ಳಲು ನಾವು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ನಾವು ವೈಯಕ್ತಿಕ ಡೇಟಾವನ್ನು ಐರೋಪ್ಯ ಆಯೋಗದಿಂದ ಸಾಕಷ್ಟು ಮಟ್ಟದಲ್ಲಿ ಡೇಟಾ ಸಂರಕ್ಷಣೆ ಹೊಂದಿಲ್ಲ ಎಂದು ನಿರ್ಧರಿಸಲಾಗುವ ಕೆಲವು ಐರೋಪ್ಯ ಆರ್ಥಿಕ ವಲಯದ ಹೊರತಾದ ಇತರ ರಾಷ್ಟ್ರಗಳಿಗೆ ವರ್ಗಾಯಿಸುತ್ತೇವೆ. ನಾವು ಹಾಗೆ ಮಾಡುವಾಗ, ವರ್ಗಾವಣೆಯನ್ನು ಪರಿಣಾಮಕಾರಿಯಾಗಿಸಲು ನಾವು ವಿವಿಧ ಕಾನೂನು ವಿಧಾನಗಳನ್ನು ಬಳಸುತ್ತೇವೆ (ಉದಾಹರಣೆಗೆ ನಿಮ್ಮ ಸಮ್ಮತಿ ಅಥವಾ ಕಾನೂನಾತ್ಮಕ ಒಪ್ಪಂದಗಳು).

# ವೈಯಕ್ತಿಕ ಡೇಟಾವನ್ನು ಬಹಿರಂಗಪಡಿಸುವುದು

ನಾವು Qualcomm ನಲ್ಲಿ (ಇದರ ಅಂಗಸಂಸ್ಥೆಗಳನ್ನು ಒಳಗೊಂಡಂತೆ) ನಿಮ್ಮ ವೈಯಕ್ತಿಕ ಡೇಟಾವನ್ನು ಆಕ್ಸೆಸ್ ಮಾಡುತ್ತೇವೆ ಮತ್ತು ಈ ನೀತಿಯಲ್ಲಿ ನಿಗದಿಪಡಿಸಿದ ಉದ್ದೇಶಗಳಿಗಾಗಿ ನಮ್ಮ ಪರವಾಗಿ ಡೇಟಾವನ್ನು ಪ್ರಕ್ರಿಯೆಗೊಳಿಸುವ ಮೂರನೇ ಪಕ್ಷದ ಮಾರಾಟಗಾರರ ಅಥವಾ ಸೇವೆ ಒದಗಿಸುವವರೊಂದಿಗೆ ಡೇಟಾವನ್ನು ಹಂಚಿಕೊಳ್ಳುತ್ತೇವೆ. ನಾವು ನಮ್ಮ ವ್ಯಾವಹಾರಿಕ ಗ್ರಾಹಕರ ನೌಕರರು ಮತ್ತು ಕಾರ್ಮಿಕರಿಗೆ ತರಬೇತಿ ಅಥವಾ ಇತರ ಸೇವೆಗಳನ್ನು ಕೂಡ ನೀಡಬಹುದು. ಅಂತಹ ಸಂದರ್ಭಗಳಲ್ಲಿ, ಗುರುತಿಸಲಾದ ವ್ಯಾವಹಾರಿಕ ಗ್ರಾಹಕರೊಂದಿಗೆ ವ್ಯಾವಹಾರಿಕ ಬಳಕೆಗಾಗಿ ನಮ್ಮ ತರಬೇತಿಗೆ ಮತ್ತು ಇತರ ಸೇವೆಗೆ ಸಂಬಂಧಿಸಿದ ಬಳಕೆಗಾಗಿ

ಡೇಟಾವನ್ನು ನಾವು ಹಂಚಿಕೊಳ್ಳಬಹುದು. ಕಾನೂನಿಗೆ ಅಗತ್ಯವಾಗಿರುವಂತೆ ಅಥವಾ ನಮ್ಮ ಅಥವಾ ಇತರರ ಕಾನೂನುಬದ್ಧ ಹಕ್ಕುಗಳನ್ನು ರಕ್ಷಿಸುವ ಅಥವಾ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವುದಕ್ಕಾಗಿ ಕೂಡ ನಾವು ನಿಮ್ಮ ಡೇಟಾವನ್ನು ಹಂಚಿಕೊಳ್ಳಬಹುದು, ಉದಾಹರಣೆಗೆ, ಕಾನೂನನ್ನು ಜಾರಿಗೊಳಿಸುವ ಅಧಿಕಾರಿಗಳಿಂದ ವಿನಂತಿ ಮತ್ತು ನ್ಯಾಯಾಲಯದ ವಿಚಾರಣೆಗಳಿಗೆ ಅಗತ್ಯವಾಗುವುದು. ನಮ್ಮ ವ್ಯವಹಾರದ ಎಲ್ಲಾ ಅಥವಾ ಕೆಲವು ವಿಭಾಗಗಳ ಭವಿಷ್ಯದ ಅಥವಾ ನೈಜ ಮಾರಾಟ, ವಿಲೀನ, ವರ್ಗಾವಣೆ ಅಥವಾ ಇತರ ಮರುಸಂಘಟನೆಗಳು ಉಂಟಾದಾಗ ನಾವು ನಿಮ್ಮ ಡೇಟಾವನ್ನು ಹಂಚಿಕೊಳ್ಳಬಹುದು ಅಥವಾ ವರ್ಗಾಯಿಸಬಹುದು. ಅಂತಿಮವಾಗಿ, ನೀವು ನಮಗೆ ಅನುಮತಿಸಿರುವಲ್ಲಿ ನಾವು ನಿಮ್ಮ ವೈಯಕ್ತಿಕ ಡೇಟಾವನ್ನು ಹಂಚಿಕೊಳ್ಳಬಹುದು.

# ನಿಮ್ಮ ಆಯ್ಕೆಗಳು

ಒಳಬರುವುದು/ಹೊರಗುಳಿಯುವುದು. ಇಮೇಲ್ ಮಾರ್ಕೆಟಿಂಗ್‌ನಂತಹ ಕೆಲವು ಸನ್ನಿವೇಶಗಳಲ್ಲಿ, ನಾವು ನಿಮಗೆ ಹೊರಗುಳಿಯುವ ಅಥವಾ ಒಳಬರುವ ಅವಕಾಶವನ್ನು ಕೆಲವು ವಿಧದ ಡೇಟಾ ಸಂಗ್ರಹಣೆ, ಬಳಕೆ ಅಥವಾ ಹಂಚಿಕೊಳ್ಳುವಿಕೆಯಲ್ಲಿ ಒದಗಿಸುತ್ತೇವೆ. ಅಂತಹ ಸನ್ನಿವೇಶಗಳಲ್ಲಿ ನಾವು ನಿಮ್ಮ ಆಯ್ಕೆಯನ್ನು ಗೌರವಿಸುತ್ತೇವೆ.

**ಡೇಟಾ ವಿಷಯದ ಹಕ್ಕುಗಳು.** ಕೆಲವು ದೇಶಗಳಲ್ಲಿನ ಅಥವಾ ರಾಜ್ಯಗಳಲ್ಲಿನ ಕಾನೂನುಗಳು ನಿಮಗೆ ನಿಮ್ಮ ವೈಯಕ್ತಿಕ ಡೇಟಾಕ್ಕೆ ಸಂಬಂಧಿಸಿದಂತೆ ಪ್ರವೇಶಾವಕಾಶಕ್ಕೆ ವಿನಂತಿಸಲು, ಸರಿಪಡಿಸಲು, ಅಳಿಸಲು, ನಿರ್ಬಂಧಿಸಲು ಹಾಗೂ ಇತರ ಹಕ್ಕುಗಳನ್ನು ಒದಗಿಸುತ್ತವೆ. ಆ ಹಕ್ಕುಗಳನ್ನು ಚಲಾಯಿಸಲು ಇಲ್ಲಿ ಕ್ಲಿಕ್ ಮಾಡಿ.

**ಟ್ರ್ಯಾಕ್ ಮಾಡಬೇಡಿ**. ಸದ್ಯ ನಾವು ಬ್ರೌಸರುಗಳು ನೀಡುವ "ಡು ನಾಟ್ ಟ್ರ್ಯಾಕ್" ("DNT") ಸಿಗ್ನಲ್ ಗಳಿಗೆ ಪ್ರತಿಕ್ರಿಯಿಸುವುದಿಲ್ಲ. DNT ಸಿಗ್ನಲ್‌ಗಳನ್ನು ಹೇಗೆ ಅರ್ಥವಿವರಣೆ ಮಾಡಬೇಕು ಎನ್ನುವ ಕುರಿತು ನಿರ್ಧರಿಸಲು ಮತ್ತು ಅವುಗಳನ್ನು ಪಡೆಯುವ ವೆಬ್‌ಸೈಟುಗಳು ಮತ್ತು ಮೂರನೇ ಪಕ್ಷಗಳು ಏನು ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವ ಕುರಿತು ಏಕಸಮಾನವಾದ ಮಾನದಂಡ ಇರುವುದಿಲ್ಲ. ಆದರೆ, ನೀವು ಡೇಟಾ ಸಂಗ್ರಹಣೆ ಮತ್ತು ಬಳಕೆಯನ್ನು ನಿಯಂತ್ರಿಸಲು ಬ್ರೌಸರ್ ಸೆಟ್ಟಿಂಗ್‌ಗಳಲ್ಲಿ ಕುಕೀ ನಿಯಂತ್ರಣಗಳ� ಮತ್ತು ಮೇಲೆ ವಿವರಿಸಿದ ಕುಕೀಗಳ ವಿಭಾಗದಲ್ಲಿ ವೈಯಕ್ತಿಕಗೊಳಿಸಿದ ಅಡ್ವರ್ಟೈಸಿಂಗ್ ನಿಯಂತ್ರಣಗಳನ್ನು ಒಳಗೊಂಡು ಇನ್ನಿತರ ಅನೇಕ ವಿಧಾನಗಳನ್ನು ಬಳಸಬಹುದು.

# ಉಳಿಸಿಕೊಳ್ಳುವಿಕೆ

ನಿಮ್ಮ ಖಾತೆ ಸಕ್ರಿಯವಾಗಿರುವಾಗ ಅಥವಾ ನಿಮಗೆ ಸೇವೆಗಳನ್ನು ಒದಗಿಸಲು ಅಗತ್ಯವಿರುವಾಗ ನಾವು ವೈಯಕ್ತಿಕ ಡೇಟಾವನ್ನು ಉಳಿಸಿಕೊಳ್ಳುತ್ತೇವೆ. ಡೇಟಾವನ್ನು ಸಂಗ್ರಹಿಸಿರುವ ವ್ಯವಹಾರ ಉದ್ದೇಶಕ್ಕಾಗಿ ಅಗತ್ಯವಿಲ್ಲದೇ ಇರುವಾಗ ನಾವು ವೈಯಕ್ತಿಕ ಡೇಟಾವನ್ನು ಸಮಂಜಸವಾದ ಸಮಯದೊಳಗೆ ಅಳಿಸುತ್ತೇವೆ. ಆದಾಗ್ಯೂ, ನಾವು ನಮ್ಮ ಕಾನೂನುಬದ್ಧ ಜವಾಬ್ದಾರಿಗಳನ್ನು ಪಾಲಿಸಲು, ವಿವಾದಗಳನ್ನು ಪರಿಹರಿಸಲು ಮತ್ತು ನಮ್ಮ ಒಪ್ಪಂದಗಳನ್ನು ಜಾರಿಗೆ ತರಲು ಅಗತ್ಯವಾದ ವೈಯಕ್ತಿಕ ಡೇಟಾವನ್ನು ಉಳಿಸಿಕೊಳ್ಳುತ್ತೇವೆ ಮತ್ತು ಬಳಸುತ್ತೇವೆ.

# ಸುರಕ್ಷತೆ

ಇಂಟರ್‌ನೆಟ್‌ಲ್ಲಿನ ಟ್ರಾನ್ಸ್‌ಮೀಶನ್‌ಗಳು ಎಂದಿಗೂ 100% ಸುರಕ್ಷಿತ ಅಥವಾ ದೋಷ-ಮುಕ್ತವಾಗಿರುವುದಿಲ್ಲ. ಆದಾಗ್ಯೂ, ನಿಮ್ಮ ಡೇಟಾವನ್ನು ನಷ್ಟ, ದುರ್ಬಳಕೆ, ಮತ್ತು ಅನಧಿಕೃತ ಪ್ರವೇಶ, ಬಹಿರಂಗಪಡಿಸುವಿಕೆ, ಬದಲಾವಣೆ ಮತ್ತು ನಾಶದಿಂದ ರಕ್ಷಿಸಲು ನಾವು ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ನಿಮ್ಮ ಪಾಸ್ವರ್ಡ್ ಮತ್ತು ಬಳಕೆದಾರರ ID ಗಳನ್ನು ಕಾಪಾಡುವುದು ನಿಮ್ಮ ಜವಾಬ್ದಾರಿಯಾಗಿದೆ ಮತ್ತು ನಮ್ಮ ಸೇವೆಗಳಲ್ಲಿ ಒಂದಕ್ಕೆ ನಿಮ್ಮ ಪಾಸ್ವರ್ಡ್ ಅಥವಾ ಬಳಕೆದಾರ ID ಹೊಂದಾಣಿಕೆ ಮಾಡಲಾಗಿದೆ ಅನುಮಾನ ಉಂಟಾದಲ್ಲಿ ಕೆಳಗೆ ನೀಡಿದ ಸಂಪರ್ಕ ವಿಧಾನಗಳಲ್ಲಿ ಒಂದನ್ನು ಬಳಸಿ ನಮಗೆ ತಿಳಿಸಬೇಕು. ನಿಮ್ಮ ಪಾಸ್ವರ್ಡ್ ಮತ್ತು ಬಳಕೆದಾರ ID ಮೂಲಕ ನಡೆಸಲಾದ ನಮ್ಮ ಸೇವೆಗಳ ಅನಧಿಕೃತ ಬಳಕೆಗೆ ನೀವು ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತೀರಿ.

# ಮಕ್ಕಳ ಗೌಪ್ಯತೆ

ನಮ್ಮ ಸೇವೆಗಳನ್ನು ವಯಸ್ಕರಿಗೆ ಉದ್ದೇಶಿಸಲಾಗಿದೆ. ಅನ್ವಯಿಸುವ ಕಾನೂನಿನ ಪ್ರಕಾರ ನಾವು ಉದ್ದೇಶಪೂರ್ವಕವಾಗಿ ಅಥವಾ ತಿಳಿದೂ ಮಕ್ಕಳಿಂದ ವೈಯಕ್ತಿಕವಾಗಿ-ಗುರುತಿಸಬಹುದಾದ ಮಾಹಿತಿಯನ್ನು ಸಂಗ್ರಹಿಸುವುದಿಲ್ಲ ಮತ್ತು ಮಕ್ಕಳು ಯಾವುದೇ ವೈಯಕ್ತಿಕ ಡೇಟಾವನ್ನು ನಮಗೆ ಸಲ್ಲಿಸಬಾರದು ಎಂದು ನಾವು ವಿನಂತಿಸುತ್ತೇವೆ.

# ತಿದ್ದುಪಡಿಗಳು

ಯಾವುದೇ ಸಮಯದಲ್ಲಿ ಈ ನೀತಿಯ ಭಾಗಗಳನ್ನು ಬದಲಾಯಿಸುವ, ಮಾರ್ಪಡಿಸುವ, ಸೇರಿಸುವ ಅಥವಾ ತೆಗೆದುಹಾಕುವ ಹಕ್ಕನ್ನು ನಾವು ಕಾಯ್ದಿರಿಸಿಕೊಳ್ಳುತ್ತೇವೆ, ಆದರೆ ಇದನ್ನು ಕೊನೆಯಾಗಿ ನವೀಕರಿಸಲಾದ ದಿನಾಂಕದಂದು ಸೂಚಿಸುವ ಮೂಲಕ ಬದಲಾವಣೆಗಳನ್ನು ಮಾಡಿದ್ದೇವೆ ಎಂದು ನಿಮಗೆ ಎಚ್ಚರಿಸುತ್ತವೆ. ನಾವು ನೀತಿಯನ್ನು ಗಣನೀಯ ರೀತಿಯಲ್ಲಿ ಬದಲಾಯಿಸಿದರೆ, ಕಾನೂನಿಗೆ ಅಗತ್ಯವಿರುವಂತೆ ನಾವು ಕನಿಷ್ಠ ಮೂವತ್ತು ದಿನಗಳ

ಮುಂಚಿತವಾಗಿ ನಿಮಗೆ ಸೂಕ್ತವಾದ ಆನ್‌ಲೈನ್ ನೋಟಿಸನ್ನು ನೀಡುತ್ತೇವೆ ಮತ್ತು / ಅಥವಾ ನಿಮ್ಮ ಸುವ್ಯಕ್ತ ಸಮ್ಮತಿಯನ್ನು ಪಡೆದುಕೊಳ್ಳುತ್ತೇವೆ. ನಮ್ಮ ವೆಬ್‌ಸೈಟುಗಳನ್ನು ನೀವು ಭೇಟಿ ಮಾಡಿದಾಗ ಅಥವಾ ನಮ್ಮ ಸೇವೆಗಳನ್ನು ಬಳಸಿದಾಗ, ನೀವು ಈ ನೀತಿಯ ಪ್ರಸ್ತುತ ಆವೃತ್ತಿಯನ್ನು ಒಪ್ಪಿಕೊಳ್ಳುತ್ತೀರಿ. ಯಾವುದೇ ಬದಲಾವಣೆಗಳ ಕುರಿತು ತಿಳಿಯಲು ಬಳಕೆದಾರರು ಈ ನೀತಿಯನ್ನು ಪುನಃ ಗಮನಿಸುವುದನ್ನು ನಾವು ಶಿಫಾರಸು ಮಾಡುತ್ತೇವೆ.

# ನಮ್ಮನ್ನು ಸಂಪರ್ಕಿಸಿ

ನಮ್ಮನ್ನು ಸಂಪರ್ಕಿಸಲು, privacy[ಅಟ್]qualcomm[ಡಾಟ್]com ಮೂಲಕ ಇಮೇಲ್ ಕಳುಹಿಸಿ ಅಥವಾ Qualcomm Incorporated, Attn. ಪ್ರೈವಸಿ ಕೌನ್ಸೆಲ್, 5775 Morehouse Drive, San Diego, CA 92121.

ಜಾರಿಯ ದಿನಾಂಕ: ಏಪ್ರಿಲ್ 30, 2019

© 2019 Qualcomm Technologies, Inc. ಮತ್ತು / ಅಥವಾ ಅದರ ಅಂಗಸಂಸ್ಥೆ ಕಂಪನಿಗಳು